

# ಫಿಟ್ಟೋನಿಯಾ ವರ್ಣ ವೈವಿಧ್ಯ

■ ಸೀಮಾ ಹೆಗಡೆ

**ಒಳಾಂಗಣಕ್ಕೆ ಆಕರ್ಷಕ ಕಳೆ ತರುವ ಫಿಟ್ಟೋನಿಯಾ ಗಿಡಗಳ ಬಣ್ಣ ವೈವಿಧ್ಯವೇ ಅವುಗಳಿಗೆ ಅನನ್ಯ ಸೌಂದರ್ಯ ದಕ್ಕಿಸಿಕೊಟ್ಟಿದೆ. ತೇವಾಂಶವನ್ನು ಪ್ರೀತಿಸುವ ಈ ಗಿಡಗಳು ಮನೆಯ ವಾತಾವರಣಕ್ಕೆ ಒಗ್ಗಿ ಬೆಳೆಯಬಲ್ಲವು.**



ಮನುಷ್ಯನ ಅಂಗಾಂಗಕ್ಕೂ ಸಸ್ಯಗಳ ಹೂವು ಕಾಯಿಗೂ ಏನೋ ಹೇಳತೀರದ ಸಂಬಂಧ. ಮೆದುಳಿನಂಥ ಅಕ್ರೂಟ್, ಕಿಡ್ನಿಯಂತಹ ಅವರೆ, ಲೇಡಿಸ್ ಫಿಂಗರ್‌ನಂಥ ಬೆಂಡೆ, ಕಮಲದಂಥ ನಯನ, ತೊಂಡೆಯಂಥ ತುಟಿ – ಈ ಬಣ್ಣನೆಗೆ ಕೊನೆ ಮೊದಲುಂಟೆ? ತೌಲನಿಕ ಸೌಂದರ್ಯದ ಈ ಪಟ್ಟಿಗೆ ಇನ್ನೊಂದು ಸೇರ್ಪಡೆ, ನರನಾಡಿಗಳ ವ್ಯೂಹವನ್ನು ಹೋಲುವ ಎಲೆಗಳುಳ್ಳ 'ನರ್ವ್ ಪ್ಲಾಂಟ್' ಅಥವಾ 'ಫಿಟ್ಟೋನಿಯಾ'.

ಗಾಢ ಹಸುರು ಎಲೆಗಳ ಮೇಲೆ ಬೆಳ್ಳಿ ನರಗಳು; ಕಡು ಹಸುರು ಎಲೆಗಳ ಮೇಲೆ ಕೆಂಪು ನರಗಳು; ತಿಳಿ ಗುಲಾಬಿ ಎಲೆಗಳ ಮೇಲೆ ಹಸುರು ನರಗಳು; ನಿಯಾನ್ ಪಿಂಕ್, ಲೈಮ್ ಗ್ರೀನ್, ಫ್ಲೇಮ್ ಆರೆಂಜ್; ಹೀಗೆ ಕಾಂಟ್ರಾಸ್ಟಿಂಗ್ ಬಣ್ಣಗಳ ವೈವಿಧ್ಯಮಯ ವಿನ್ಯಾಸದ ಎಲೆನರಗಳನ್ನು ಹೊಂದಿರುವ ಫಿಟ್ಟೋನಿಯಾ ಹೆಸರಾಂತ ಒಳಾಂಗಣ ಸಸ್ಯ.

ಇದರ ತವರೂರು ದಕ್ಷಿಣ ಅಮೆರಿಕದ ಪೆರು ಪ್ರದೇಶದ ಮಳೆಕಾಡು. ಅಲ್ಲಿನ ನಾಟಿ ಔಷಧಿಯಲ್ಲಿ ತಲೆನೋವಿನ ಶಮನಕ್ಕೆ ಫಿಟ್ಟೋನಿಯಾದ ಎಲೆಗಳು ಬಳಕೆಯಲ್ಲಿದ್ದವಂತೆ. 1867ರಲ್ಲಿ ಎಲಿಜಬೆತ್ ಮತ್ತು ಸಾರಾ ಫಿಟ್ಟಾನ್ ಎಂಬ ಸಹೋದರಿಯರು ತಮ್ಮ ಪುಸ್ತಕದಲ್ಲಿ ಪ್ರಥಮ ಬಾರಿ ಈ ಸಸ್ಯವನ್ನು ಜನಪ್ರಿಯಗೊಳಿಸಿದ್ದರು. ಅವರ ಗೌರವಾರ್ಥ, ಮುಂದೆ ಈ ಸಸ್ಯಕುಲಕ್ಕೆ ಫಿಟ್ಟೋನಿಯಾ ಎಂದೇ ನಾಮಕರಣ ಮಾಡಲಾಯಿತು.

ಉಷ್ಣವಲಯದ ನಿತ್ಯಹರಿದ್ವರ್ಣ ಕಾಡಿನ ಮಬ್ಬು ನೆಲದ ಈ ಸಸ್ಯಗಳು ಹೆಚ್ಚುಕಮ್ಮಿ ಇದೇ ವಾತಾವರಣವನ್ನು ಹೋಲುವ ಮನೆಯ ಒಳಾಂಗಣಕ್ಕೆ ಅನಾಯಾಸವಾಗಿ ಹೊಂದಿಕೊಳ್ಳಬಲ್ಲವು. ಕಾನು ಮಣ್ಣನ್ನೇ ಹೋಲುವ ಒಳ್ಳೆಯ ಪೋಷಕಾಂಶಭರಿತ ಗೊಬ್ಬರ ಮಿಶ್ರಿತ ಮಣ್ಣು ಸೂಕ್ತ. ಬೆಚ್ಚನೆಯ ವಾತಾವರಣ, ಹೆಚ್ಚು ಆರ್ದ್ರತೆ, ಮಣ್ಣಿನಲ್ಲಿ ಹೆಚ್ಚಿನ ತೇವಾಂಶ ಇವುಗಳಿಗೆ ಇಷ್ಟದ ಸಂಗತಿ. ಮೆತ್ತನೆಯ ಕಾಂಡ, ಪೇಪರ್ ಎಲೆಗಳನ್ನು ಹೊಂದಿರುವ ಈ ಸಸ್ಯಗಳಿಗೆ ನೀರು ಎಂದರೆ ಪ್ರೀತಿ. ನೀರಿಲ್ಲದಿದ್ದರೆ ಬಾಡಿ ಬಗ್ಗಿ ಪ್ರತಿಕ್ರಿಯಿಸುತ್ತವೆ; ನೀರುಣಿಸಿದ ಕೂಡಲೆ ಅಷ್ಟೇ ಬೇಗನೆ ಚೇತರಿಸಿಕೊಳ್ಳುತ್ತವೆ.

ಇದರ ಆರ್ದ್ರತೆ ಕಾಪಾಡಲು ನೀರನ್ನು ಸಿಂಪಡಿಸುವುದು, ಮಣ್ಣು ಪೂರ್ತಿಯಾಗಿ ಒಣಗದಂತೆ ನಿತ್ಯ ನಿಯಮಿತವಾಗಿ ಸ್ವಲ್ಪ ಸ್ವಲ್ಪವಾಗಿ ನೀರುಣಿಸುವುದು ಒಳಿತು. ಅತಿಯಾದ ನೀರಿನಿಂದ ಗಿಡಗಳು ಕೊಳೆಯುವುದನ್ನು ಗಮನದಲ್ಲಿರಿಸಬೇಕು. ಸದಾ ತೇವಾಂಶವಿರುವ ಅಡುಗೆ ಮನೆ, ಸ್ನಾನದ ಕೋಣೆಯಂತಹ ಸ್ಥಳಗಳಲ್ಲಿ ಇವು ಸೊಂಪಾಗಿ ಬೆಳೆಯಬಲ್ಲವು.



ತೇವಾಂಶ ಇಷ್ಟಪಡುವ, ನಿಧಾನ ಬೆಳವಣಿಗೆ ಹೊಂದುವ ಕಾರಣ ಟೆರೇರಿಯಂಗೂ ಸೂಕ್ತ. ಮುಟ್ಟಿದರೆ ಪುಡಿಯಾಗುವ ಒಣಗಿದಂಥ ಎಲೆಗೆ ಕಾರಣ ಆರ್ದ್ರತೆಯ ಕೊರತೆ. ತೀಕ್ಷ್ಣ ಬೆಳಕು ಎಲೆಗಳನ್ನು ಸುಡಬಲ್ಲವು, ಹಾಗಾಗಿ ಸ್ವಲ್ಪ ನೆರಳಿರುವ ಜಾಗವನ್ನು ಆಯ್ಕೆ ಮಾಡುವುದು ಒಳಿತು.

ಒಂದೊಂದೇ ಹೊಸ ಎಲೆಗಳನ್ನು ಹೊರ ಚಾಚುತ್ತಾ ನಿಧಾನಕ್ಕೆ ಬೆಳೆವ ಫಿಟ್ಟೋನಿಯಾ ಇತರೆ ಒಳಾಂಗಣ ಸಸ್ಯಗಳ ನಡುವೆ ಆಕರ್ಷಕ ಕಳೆಯೊಂದನ್ನು ತರಬಲ್ಲವು. ಬೇರೆಲ್ಲಾ ಒಳಾಂಗಣ ಸಸ್ಯಗಳಿಗೆ ಹೋಲಿಸಿದರೆ ಫಿಟ್ಟೋನಿಯಾಗಳ ಪೋಷಣೆ ಸ್ವಲ್ಪ ಕಷ್ಟವೇ. ಆದರೆ ಅವುಗಳ ಬೇಡಿಕೆ ಒಮ್ಮೆ ಅರ್ಥವಾದರೆ ಈ ಕೆಲಸ ಅಷ್ಟೇ ಸುಲಭ ಮತ್ತು ಖುಷಿಕರ.

ಪ್ರತಿಕ್ರಿಯಿಸಿ: feedback@sudha.co.in